ಮೈಸೂರ ಗೆಜೆಟ್ಟ.

ಸಂ. XXXI.] ಸರ್ಕಾರದಿಂದ ಘಾಯಿಷ್ ಆದ್ದು. [ನಂ. 17.

ಬೆಂಗಳೂರು, ಗುರುವಾರ, ಏಪ್ರೆಲ್ ತಾ॥ 30, ಸ॥ 1896.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟ್ರು, ರಿಜಿಸ್ಟ್ರೇರ್ಷ ವ ಯಜ್ಯುಕೇರ್ಷ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷನ್ ಜಡ್ಜಿರು, ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜಿರು, ಪೋಲೀಸ್ ಸೂಪರ್ಟೆಂಡೆಂಟರು, ಫಾರೆಸ್ಟ್ರು ಆಫಿಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ ಕಾಲಸ್ಕಾತೀ ರಿಪೋರ್ಟುಗಳು; ಪೋಸ್ಟಾಫಿಸ್ ನೋಟೀಸ್‌ಗಳು.

3ನೇ ಭಾಗ—ಮೈಸೂರ್ ಸರ್ಕಾರದಿಂದ ಮುಂಜೂರ್ಮಾಡಲ್ಪಟ್ಟ ಅಕ್ಟ್ಸುಗಳು ವ ರೆಗ್ಯುಲೇರ್ಷಗಳು.

4ನೇ ಭಾಗ—ಸರ್ಕಾರಿ ಕಾಗದ ಪತ್ರಗಳು.—ಇಲ್ಲ.

ಸೂಚನೆ. ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

1ನೇ ಭಾಗ.

ಮೈಸೂರ್ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ಮೊಕ್ಕಾಂ ಮೈಸೂರು, ತಾರೀಖು 15ನೇ ಏಪ್ರೆಲ್ 1896.

ನಂ. 9395.—ಫೈ. 653, ಮೈಸೂರ್ ಸರ್ವಿಸ್ ರೆಗ್ಯುಲೇರ್ಷಗಳ 171ನೇ ಆರ್ಟಿಕಲ್ ಅನುಸರಿಸಿ ಸ್ಟೇಟ್ ಹುಜೂರ್ ಟ್ರೆಜರಿಯ ಇನ್‌ಚಾರ್ಜ್ ಆಫಿಸರಾದ ಮೆಸ್ಸರ್ ಎ. ವೀರಾಸಾಮಿ ಮೊದಲಿಯಾರ್‌ಗೆ ಮೂಹೆ ಮಜಕೂರು 21ನೇ ಮುಕ್ತಂ ಲಾಗಾಯತು ಯೂ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಮೂರು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ಟ್ರೆಜರರ್ ಮೆಸ್ಸರ್ ರಾಯಲುಜಪ್ಪಯನವರು ಸದರೀ ಮೆಸ್ಸರ್ ವೀರಾಸಾಮಿ ಮೊದಲಿಯಾರ್ರು ರಜಾದ ಮೇಲೆ ಗೈರಹಾಜರಿರುವ ಕಾಲದಲ್ಲಿ ತಮ್ಮ ಕೆಲಸಗಳೊಂದಿಗೆ ಟ್ರೆಜರಿಯ ಚಾರ್ಜಿನಲ್ಲಿ ಹಂಗಾಮಿ ತರೀಕ ಇರತಕ್ಕದ್ದು.

ತಾರೀಖು 24ನೇ ಮಾರ್ಚ್ 1896.

ನಂ. 8758.—ಆರ್. 3394. 1894ನೇ ಇಸವಿ VIIನೇ ನಂಬರ್ ಲ್ಯಾಂಡ್ ಅಕ್ವಿಜೆಷ್ನ್ ರೆಗ್ಯುಲೇಷನಿನ 6ನೇ ಸೆಕ್ಷನ್ ನಿಯಮಗಳನುಸರಿಸಿ ಯಿದರಿಂದ ಪ್ರಕಟಿಸಲ್ಪಡುವದೇನಂದರೆ,—ಈ ಕೆಳಗೆ ನಮೂದಿಸಿರುವ ಜಮೀನುಗಳು ಸರ್ಕಾರ್ ಕೆಲಸಕ್ಕೆ ಅಂದರೆ ಕೋಲಾರದಲ್ಲಿ ಹೆಪ್ಯೂಟಿ ಕಮ್ಮಿಷನರವರ ಹೊಸ ಬಂಗಲೆಯ ಕಂಪೌಂಡಿಗಾಗಿ ಬೇಕಾಗಿಯಿರುತ್ತೆ.

ಡಿಸ್ಟ್ರಿಕ್ಟು	ತಾಲ್ಲೂಕು	ಹೋಬ್ಳಿ	ಗ್ರಾಮ	ಖಾತೇದಾರರ ಹೆಸರು.	ಸರ್ವೇ ಸೆಟಲ್‌ಮೆಂಟಿಗೆ ಪೂರ್ವದ ಹಳೇ ಲೆಖ್ಕಗಳ ಪ್ರಕಾರ ಜಮೀನಿನ ತಪ್ಶೀಲ್.				ಚಕ್ತುಬಂದಿ.			
					ನಿನರಣಿ.	ನಂಬರು.	ವಿಸ್ತೀರ್ಣ.	ಕಂದಾಯ.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
							ಖಂ. ಕೊ. ಪ. ರೂ. ಆ. ಪೈ					
ಕೋಲಾರ	ಕೋಲಾರ	ಕೋಲಾರ	ಕೋಲಾರ ಟೌನ್	ಗೋವಿಂದರಾಜು ಖಿಲ್ಲೆ (ಅನುಭವದಾರ ತಿಮ್ಮಾ ಮೇಸ್ತ್ರಿ)	ಖುಷ್ಕಿ	603	0—0—2	0-1-9	ಮಾಜಿ ನಂ. 602 ತೋಟ	ಮಾಜಿ ನಂ. 604 ಬಂಜರು	ಮಾಜಿ ನಂ. 605 ಪಲ್ಲಿಗಕುಂಟೆ	ಮಾಜಿ ನಂ. 599 ಸರ್ಕಾರದ ಬಂಜರು
					ಖುಷ್ಕಿ	605	0—0—10½	0-9-2				
				ವಾನಂಬಾಡಿ ಬಸಪ್ಪ (ಅನುಭವದಾರ ತಿಮ್ಮಾ ಮೇಸ್ತ್ರಿ)	ಖುಷ್ಕಿ	605	0—0—7¾	0-6-11	ಮಾಜಿ ನಂ. 606 ಬಂಜರು	ಮಾಜಿ ನಂ. 598 ರಸ್ತೆ	ಮಾಜಿ ನಂ. 486 ಚರಂಡಿ	ಮಾಜಿ ನಂ. 602, 603 ಮತ್ತು 604 ಬಂಜರು

ತಾರೀಖು 16ನೇ ಏಪ್ರೆಲ್ 1896.

ನಂ. ಸಿ. 150.—ಫ್ರೆಂಚರಾಕ್ಸ್ ಸಬ್ ಡಿವಿಜ್ ಪೊಲೀಸ್ ಅಸಿಸ್ಟೆಂಟ್ ಸೂಪರ್‌ಟೆಂಡೆಂಟರಾದ ಮೆಸ್ಟರ್ ಎಂ. ನಂಜರಾಜ ಅರಸಿನವರಿಗೆ 1896ನೇ ಏಪ್ರೆಲ್ 15ನೇ ಮಟ್ಟಿಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಹತ್ತು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ನಂ. ಸಿ. 160.—ಸ್ ೧೮೯೪ನೇ ಇಸವಿಯ ಮೈಸೂರ್ ಜೈಲ್ ಮ್ಯಾನ್ಯುಯಲಿನ 86ನೇ ಪುಟವಲ್ಲಿ ಛಾಪಿಸಿರುವ 519ನೇ ರೂಲಿಗೆ ಬದಲಾಗಿ ಇದರಡಿ ಕಂಡಪ್ರಕ್ಕನ್ನು ಸೇರಿಸತಕ್ಕದ್ದೆಂದು ಮೈಸೂರ್ ಗವರ್ನ್‌ಮೆಂಟಿನವರು ಹುಕುಂ ಮಾಡಿರುತ್ತಾರೆ:

"519. ಯಾವ ಖೈದಿಯಾಗಲಿ ಅಪಾಯಕರವಾದ ಯಾ ಗುಣವಾಗದ ಕಾಹಿಲೆಯಲ್ಲಿದ್ದು ಮತ್ತು ಚಂಥಾವನ ವಿಷಯದಲ್ಲಿ ಸದರೀ ಖೈದಿಯು ಖುಲಾಸೆ ಮಾಡಲ್ಪಟ್ಟ ಹೊತ್ತು ಅನ್ಯಥಾ ಬದುಕಲಾರನೆಂದು ಸದರೀ ಬಂದೀಖಾನೆಯ ಮೆಡಿಕಲ್ ಆಫಿಸರರು ಅಭಿಪ್ರಾಯ ಪಟ್ಟರೆ ಜೈಲ್ ಸೂಪರ್‌ಟೆಂಡೆಂಟಂರು, ಗವರ್ನ್‌ಮೆಂಟ್ ಆರ್ಡರ್ ಅನುಸರಿಸಿ ಖುಲಾಸೆ ಮಾಡಲ್ಪಡುವ ಬಗ್ಯಾಗಿ ಬಂದೀಖಾನೆಯ ಇನ್‌ಸ್ಪೆಕ್ಟರ್ ಜನರಲ್‌ಯವರಿಗೆ ತಿಳಿಕಾಸ್ ಮಾಡಬಹುದು. ಇಂಥಾ ಸಂದರ್ಭಗಳಲ್ಲಿ ಜೈಲ್ ಸೂಪರ್‌ಟೆಂಡೆಂಟರವರು ಸದರೀ ಖೈದಿಯು ಬಂದೀಖಾನೆಯಲ್ಲಿರುವಾಗ್ಯೆ ಅಕ್ಷಯ ನಷ್ಟತೆಯುಳ್ಳವನಾಗಿರಲಿಲ್ಲವೆಂದು ದೃಢಪಡಿಸಬೇಕು ಮತ್ತು ಮೆಡಿಕಲ್ ಆಫಿಸರರು, ಸದರೀ ಖೈದಿಯು ಖುಲಾಸೆ ಬಗ್ಯಾಗಿ ಕಾರಣಭೂತವಾದ ಕಾಹಿಲೆಯು ಯಾವ ವಿಧದಿಂದಲಾಗಲಿ ಖೈದಿಯು ಮನಃಪೂರ್ವಕ ಮಾಡಿದ ಕೆಲಸದಿಂದ ಉಂಟಾಗಲಿಲ್ಲವೆಂತಲೂ ಅಥವಾ ಹೆಚ್ಚಾಗಲಿಲ್ಲವೆಂತಲೂ ಮತ್ತು ಸದರೀ ಖೈದಿಯು ಇನ್ನೂ ಬಂದೀಖಾನೆಯಲ್ಲಿ ಯಿಡಲ್ಪಟ್ಟರೆ ಅವನ ಪ್ರಾಣಕ್ಕೆ ಅಪಾಯ ಉಂಟಾಗುವದೆಂತಲೂ ಮತ್ತು ಸದರಿಯವನು ಖುಲಾಸೆ ಮಾಡಲ್ಪಟ್ಟರೆ ಕಾಹಿಲೆಯು ಗುಣವಾಗಬಹುದೆಂತಲೂ ಸರ್ಟಿಫೈ ಮಾಡತಕ್ಕದ್ದು."

ತಾರೀಖು 4ನೇ ಏಪ್ರಿಲ್ 1896.

ನಂ. 11295.—ಲೋ. ಫಂ. 257—92, ಲ್ಯಾಂಡ್ ಅಕ್ವಿಜಿಷ್ಷ ರೆಗ್ಯುಲೇಷ್ಷ 6ನೇ ಸೆಕ್ಷ್ಷ ಅನುಸರಿಸಿ ಇದರಿಂದ ಪ್ರಕಟಪಡಿಸುವದೇನಂದರೆ,—ಈ ಕೆಳಗಿನ ಪಟ್ಟಿಯಲ್ಲಿ ತೋರಿಸಿಯಿರುವ ಜಮೀನುಗಳು ಸರ್ಕಾರದ ಕೆಲಸಕ್ಕೆ ಅಂದರೆ ಕೋಲಾರ ಡಿಸ್ಟ್ರಿಕ್ಟು ಬಾಗೇಪಲ್ಲಿ ತಾಲ್ಲೂಕು ಬಾಗೇಪಲ್ಲಿ ಟವ್ನ ಬಡಾಯಿಸುವದಕ್ಕಾಗಿ ಬೇಕಾಗಿರುತ್ತೆ:—

ನಂಬರು	ಸರ್ವೇ ನಂಬರು ಸ್ಕೆಚ್	ಖಾತೇದಾರನ ಹೆಸರು.	ವಶ್ಯವಾಗಿರುವ ಜಮೀನಿನ ವಿಸ್ತೀರ್ಣ.		ಹೊಂದಲ್ಪಡತಕ್ಕ ಜಮೀನು.		ಸರಹದ್ದು.			
			ವಿಸ್ತೀರ್ಣ	ಕಂದಾಯ.	ವಿಸ್ತೀರ್ಣ.	ಕಂದಾಯ.	ಪೂರ್ವ.	ಪಶ್ಚಿಮ.	ಉತ್ತರ	ದಕ್ಷಿಣ.
			ಎ. ಗು.	ರೂ. ಆ. ಪೈ.	ಎ. ಗು.	ರೂ. ಆ. ಪೈ.				
1	ಖುಷ್ಕಿ ನಂ. 160ರ ಪೈಕಿ	ಕಂಕರ ನಾಗಂಣ	3—31	5 12 0	1—20	2 4 0	ಫಕ್ಕುಸಾಹೇಬನ ಕಂದಾಯದ ಭೂಮಿ	ರಾಮಾಚಾರಿ, ಪುಟ್ಟಾಚಾರಿ ಮತ್ತು ವೇದಾಂತಾಚಾರ್ಯ ಯಿನಾವತಿ	ರಸ್ತೆ	ಬಾಚೇದಾರನ ಪಟ್ಟಾನಿ
2	(ಖುಷ್ಕಿ)ಭಟ್ಟಿ ಇನಾಂ ನಂ. 159	ರಾಮಾಚಾರಿ, ಪುಟ್ಟಾಚಾರಿ ಮತ್ತು ವೇದಾಂತಾಚಾರಿ	1—38	3 0 0	0—20	0 12 0	ಕಂಕರ ನಾಗಂಣನ ಕಂದಾಯದ ಭೂಮಿ	ಸುಣ್ಣಕಲ್ಲುವೆಂಕಟಣ್ಣನ ಕಂದಾಯದ ಭೂಮಿ	ರಸ್ತೆ	ಡಿಟೋ
3	ಖುಷ್ಕಿ ನಂ. 153ರ ಪೈಕಿ	ಸುಣ್ಣಕಲ್ಲು ವೆಂಕಟಿಗಾ	1—11	2 0 0	0—18	0 10 9	ಪುಟ್ಟಾಚಾರಿ, ರಾಮಾಚಾರಿವೆ ತ್ತು ವೇದಾಂತಾಚಾರ್ಯ ಇನಾವತಿ	ಕೋಡಿ ಚರುವು ಹನುಮಂತನ ಕಂದಾಯದ ಭೂಮಿ, ಮತ್ತು ಸರ್ಕಾರದ ಖಾಲೀ ಜಮೀನು	ರಸ್ತೆ	ಡಿಟೋ
4	ಡಿಟೋ	ಕೋಡಿಚರುವು ಹನುಮಂತ (ಅನುಭವದಾರ್ ನರಸಿಹ್ಮ)	3—12	5 0 0	0—15	0 9 0	ಸುಣ್ಣಕಲ್ಲುವೆಂಕಟಣ್ಣನ ಕಂದಾಯದ ಭೂಮಿ	ಹೊಣಿ ಮತ್ತು ಬಾಕಿ ಜಮೀನು	ಸರ್ಕಾರದ ಬಂಜರು ಜಮೀನು	ಡಿಟೋ

ತಾರೀಖು 18ನೇ ಏಪ್ರಿಲ್ 1896.

ನಂ. 11846.—ಮಿ. 1685, ಸ್ರ 1869ನೇ ಇಸವಿಯ ಜನರಲ್ ಸ್ಟ್ಯಾಂಪ್ ಆಕ್ಟಿನ 48ನೇ ಸೆಕ್ಷ್ಷ ಅನುಸರಿಸಿ ಮೈಸೂರ್ ಗವರ್ನಮೆಂಟಿನವರು, 1870ನೇ ಇಸವಿ ಸೆಪ್ಟಂಬರ್ 23ನೇ ಮತ್ತು 209ನೇ ನಂಬರ್‌ಉಳ್ಳ ಲೇಟ್ ಚೀಫ್ ಕಮ್ಮಿಷನರವರ ಇಸ್ತಿಹಾರ್‌ನಾಮೆಯೊಡನೆ ಪ್ರಕಟಿಸಲ್ಪಟ್ಟ Xನೇ ರೂಲನ್ನು ರದ್ದು ಮಾಡಿ ಇದರಡಿ ಬರುವ ರೂಲನ್ನು ಏರ್ಪಡಿಸಿರುತ್ತಾರೆ:—

"ಪ್ರತಿಯಕ್ಸ್ ಆಫಿಷಿಯೋ ಅಥವಾ ಲೈಸೆನ್ಸ್ ಪಡೆದಿರುವ ಬಿಕರೀದಾರನು ತಾನು ಬಿಕರಿಮಾಡುವ ಎರಡನೇ ಕ್ಲಾಸಿನ ಪ್ರತಿ ಸ್ಟ್ಯಾಂಪ್ ಕಾಗದದ ಹಿಂಭಾಗದಲ್ಲಿ ಜಂಜರ್ ನಂಬರ್, ಬಿಕರಿಯ ತಾರೀಖು, ಖರೀದಿಗೆ ಪಡೆದುಕೊಂಡವನ ಹೆಸರು ವ ವಾಸಸ್ಥಳ, ಮತ್ತು ಸದರೀ ಸ್ಟ್ಯಾಂಪು ಹಣ ಹಾಜರ್ಮಾಡಿದವನಲ್ಲದ ಇತರ ಬೇರೇ ಮನುಷ್ಯನಿಗೋಸ್ಕರ ಕೊಂಡುಕೊಳ್ಳಲ್ಪಟ್ಟರೆ ಅಂಥಾ ಇತರ ಮನುಷ್ಯನ ಹೆಸರು ವ ವಾಸಸ್ಥಳ ಮತ್ತು ಅಕ್ಷರದಲ್ಲಿ ಪೂರ್ತಿಯಾಗಿ ಸ್ಟ್ಯಾಂಪಿನ ಕಿಮ್ಮತ್ತು ಮತ್ತು ಅವನ ಸಾಧ್ಯಾರಣವಾದ-ರುಜು ಸಹ ಬರಿಯತಕ್ಕದ್ದು. ಲೋಕಲ್ ಗವರ್ನಮೆಂಟಿನಿಂದ ವಿಧಿಸಲ್ಪಡಬಹುದಾದ ನಮೂನೆಯಲ್ಲಿ ವೊಂದು ರಿಜಿಸ್ಟರ್ ರೀತ್ಯ ಸದರೀ ರಿಜಿಸ್ಟರಿನಲ್ಲಿ ಈ ತಪಶೀಲುಗಳನ್ನು ಬರಿಯತಕ್ಕದ್ದು. ಅಂಥಾ ಯಾವ ಬಿಕರಿದಾರನಾಗಲಿ ಬಿಕರಿ ಮಾಡಲ್ಪಟ್ಟ ಸ್ಟ್ಯಾಂಪಿನ ಮೇಲೆ ತನಿಗೆ ತಿಳಿದು ಯಿದ್ದೂ ಕೂಡ ಸುಳ್ಳು ಯಿಂಡಾರ್ಸ್‌ಮೆಂಟನ್ನು ಮಾಡಕೂಡದು ಅಥವಾ ತನ್ನ ರಿಜಿಸ್ಟರಿನಲ್ಲಿ ಸುಳ್ಳು ಖತಾಯಿತಿಯನ್ನು ದಾಖಲ್ಮಾಡಕೂಡದು."

ತಾರೀಖು 21ನೇ ಏಪ್ರಿಲ್ 1896.

ನಂ. 11910.—ಯ. ಫೈ. 104—95, ಬೆಂಗಳೂರ್ ಷಹರಿನ ಮ್ಯುನಿಸಿಪಲ್ ಇಂಗ್ಲೀಷ್ ಸ್ಕೂಲ್ ಅಸಿಸ್ಟೆಂಟ್ ಮಾಸ್ಟರ್ ಡಿ. ಗೋವಿಂದರಾಯರು ತಮ್ಮ ಹೆಸರನ್ನು ಡಿ. ಶಾಮರಾಯರೆಂದು ಬದಲಾಯಿಸಿಕೊಂಡಿರುವದ್ದರಿಂದ ಈ ತಾರೀಖು ಲಾಗಾಯಿತು ಸದರೀ ಹೆಸರಿನಿಂದ ಸಿಬ್ಬಂದಿಯಲ್ಲಿ ದಾಖಲ್ಮಾಡಲ್ಪಡತಕ್ಕದ್ದು.

ಕ್ಯಾಂಪ್ ನಂ. 188. ಮೊಕ್ಕಾಂ ಮೈಸೂರು, ತಾರೀಖು 24ನೇ ಏಪ್ರಿಲ್ 1896.

ಇದರಡಿ ಕಂಡ ಮೊಕರರಾತಿಗಳು ಹುಕುಂ ಮಾಡಲ್ಪಟ್ಟಿರುತ್ತವೆ:—

1. ಗವರ್ನಮೆಂಟ್ ಪ್ರಸ್, ಸ್ಟೇಷನರಿ ವ ಸ್ಟೋರುಗಳ ಸೂಪರಿಟೆಂಡೆಂಟ್, ಮೈಸೂರ್ ಗೆಜೆಟ್ ಕಂಪೈಲರ್ ಮತ್ತು ಗವರ್ನಮೆಂಟ್ ಲೈಬ್ರರಿ ಯಕ್ಸ್-ಆಫಿಷಿಯೋ ಕ್ಯೂರೇಟರಾದ ಮೆಸ್ಟರ್ ಟಿ. ಟಿ. ಲೆನರ್ಡ್ ಯವರು ಬೆಂಗಳೂರು ಷಹರಿನ ಮ್ಯುನಿಸಿಪಲ್ ಕಮ್ಮಿಷನರುಗಳ ಪೈಸಿಜೆಂಟರಾಗಿ ಮೊಕರರ್ಮಾಡಲ್ಪಟ್ಟಿರುತ್ತಾರೆ. ಚಾರ್ಜ್ ವೊಪ್ಪಿಸಿದ ತರುವಾಯ ಕೆಲಸದವೇಲೆ ಹೋಗತಕ್ಕದ್ದು.

2. ಕ್ಲೋಸ್‌ಪೇಟೆ ಸಬ್ ಡಿವಿಜ್ ಆಫಿಸರ್ ಮೆಸ್ಸರ್ ಸಿ. ವಿ. ರಾಘವಾಚಾರ್ಲು ಯವರು ಗವರ್ನಮೆಂಟ್ ಪ್ರೆಸ್ ಸೂಪರಿಂಟೆಂಡೆಂಟ್, ಮೈಸೂರ್ ಗೆಜೆಟ್ ಕಂಪೈಲರ್, ಗವರ್ನಮೆಂಟ್ ಲೈಬ್ರೆರಿ ಯಕ್ಸ್-ಅಫಿಷಿಯೋ ಕ್ಯೂರೇಟರ್ ಮತ್ತು ಸ್ಟೇಷನೆರಿ ವ ಸ್ಟೋರುಗಳ ಸೂಪರಿಂಟೆಂಡೆಂಟರಾಗಿ ಸಬ್ ಪ್ರೋಟೂ ತಾತ್ಕಾಲಿಕ ಆಕ್ಟಿಂಗಾಗಿ ಮೊಕರರ್ರಾಮಡಲ್ಪಟ್ಟಿರುತ್ತಾರೆ. ಚಾರ್ಜ್ ಪೊಪ್ಪಿಸಿದ ತರುವಾಯ ಕೆಲಸವ ಮೇಲೆ ಹೋಗತಕ್ಕದ್ದು.

3. ಪೋಲೀಸ್ ಸೂಪರಿಂಟೆಂಡೆಂಟ್ ಮೆಸ್ಸರ್ ಕೆ. ಪಿ. ಪುಟ್ಟಣ್ಣಚಟ್ಟಿಯವರು ಸದರೀ ಮೆಸ್ಸರ್ ಸಿ. ವಿ. ರಾಘವಾಚಾರ್ಲು ಯವರು ಇತರ ಕೆಲಸದ ಮೇಲೆ ಗೈರಹಾಜರಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಕ್ಲೋಸ್‌ಪೇಟೆ ಸಬ್ ಡಿವಿಜ್ ಆಫಿಸರಾಗಿ ಸಬ್ ಪ್ರೋಟೂ ತಾತ್ಕಾಲಿಕ ಆಕ್ಟಿಂಗಾಗಿ ಮೊಕರರ್ರಾಮಡಲ್ಪಟ್ಟಿರುತ್ತಾರೆ. ಕೂಡ್ಲಿ ಕೆಲಸದ ಮೇಲೆ ಹೋಗತಕ್ಕದ್ದು.

ಮೊಕ್ಕಾಂ ಮೈಸೂರು, ತಾರೀಖು 25ನೇ ಏಪ್ರೆಲ್ 1896.

ಸಿ. ನಂ. 201.—ಮೈಸೂರ ಸರ್ವಿಸ್ ರಗ್ಯುಲೇಷ್ಯಗಳ 171ನೇ ಆರ್ಟಿಕಲ್ ಅನುಸರಿಸಿ ಹೊಳಕಾಲಮುರು ತಾಲ್ಲೂಕು ಅವುಲ್‌ದಾರ್ ಎಸ್. ಕೃಷ್ಣ ಅಯರ್ ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಐದುದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ತಾಲ್ಲೂಕು ಸಿರಸ್ತೇದಾರ್ರು ತಮ್ಮ ಕೆಲಸಗಳೊಂದಿಗೆ ಸದರೀ ಎಸ್. ಕೃಷ್ಣ ಅಯ್ಯರ್ ಯವರು ರಜಾದಮೇಲೆ ಗೈರಹಾಜರಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಸದರೀ ತಾಲ್ಲೂಕಿನ ಚಾರ್ಜಿನಲ್ಲಿರತಕ್ಕದ್ದು.

ಸಿ. ನಂ. 210.—ಮೈಸೂರ್ ಸರ್ವಿಸ್ ರೆಗ್ಯುಲೇಷ್ಯಗಳ 172ನೇ ಆರ್ಟಿಕಲ್ ಅನುಸರಿಸಿ ಮೈಸೂರ್ ಡಿಸ್ಟ್ರಿಕ್ಟು ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಸರ್ ಯ್ಯ. ವೆಂಕಟರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಹತ್ತು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ಕ್ಯಾಂಪ್ ನಂ. 204.—ಮೈಸೂರ್ ಸರ್ವಿಸ್ ರೆಗ್ಯುಲೇಷ್ಯಗಳ 172ನೇ ಆರ್ಟಿಕಲ್ ಅನುಸರಿಸಿ ಫಾರೆಸ್ಟ್ಯಗಳ ಅಸಿಸ್ಟೆಂಟ್ ಕ್ಯ ಸರ್ವೇಯರ್ ಮೆಸ್ಸರ್ ಸಿ. ಅಪ್ಪಯ್ಯನವರಿಗೆ 1896ನೇ ಏಪ್ರೆಲ್ 27ನೇ ಮಕ್ತುಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಬಂದು ವಾರದ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 12102.—ಜು. 1365, ಕಡೂರು ಡಿಸ್ಟ್ರಿಕ್ಟು ಪೋಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾದ ಮೆಸ್ಸರ್ ಬಲ್ಲಾರ್ಡ್ ಯವರಿಗೆ 1896ನೇ ಏಪ್ರೆಲ್ 4ನೇ ಮಕ್ತುಂ 11323.—ಜು. 1252ನೇ ನಂಬರ್ ಗವರ್ನಮೆಂಟ್ ಇಸ್ತಿಹಾರ್‌ನಾಮೆಯಲ್ಲಿ ಕೊಡಲ್ಪಟ್ಟಿದ್ದ ಎರಡು ತಿಂಗಳೂ ಮತ್ತು ಏಳು ದಿನಗಳ ಪ್ರಿವಿಲೀಜ್ ರಜಾ ಇನ್ನೂ ಇಪ್ಪತ್ಮೂರು ದಿನಗಳ ಪರಿಯಂತ ಜಾಸ್ತೀ ಮಾಡಲ್ಪಟ್ಟಿರುತ್ತೆ.

ಮೊಕ್ಕಾಂ ಮೈಸೂರ್, ತಾರೀಖು ನೇ ಏಪ್ರೆಲ್ 1896.

ಸಿ. ನಂ. 207.—ಜೀಫ್ ಸೆಕ್ರಿಟರಿಯರಾದ ಮೆಸ್ಸರ್ ಟಿ. ಆನಂದರಾಯರವರಿಗೆ 1896ನೇ ಜನವರಿ 28ನೇ ಮಕ್ತುಂ 6677—ಫೈ. 336ನೇ ನಂಬರ್ ಗವರ್ನಮೆಂಟ್ ಇಸ್ತಿಹಾರ್‌ನಾಮೆಯಲ್ಲಿ ಮೆಡಿಕಲ್ ಸರ್ಟಿಫಿಕೇಟಿನ ಮೇಲೆ ಕೊಡಲ್ಪಟ್ಟಿದ್ದ ರಜಾವನ್ನು ಮೂರುತಿಂಗಳುಗಳಿಗೆ ಜಾಸ್ತೀ ಮಾಡಲ್ಪಟ್ಟಿರುತ್ತೆ.

ಮೊಕ್ಕಾಂ ಮೈಸೂರ್ ತಾರೀಖು-25ನೇ ಏಪ್ರೆಲ್ 1896.

ಕ್ಯಾಂಪ್ ನಂ. 213.—ಮೈಸೂರ್ ಸರ್ವಿಸ್ ರೆಗ್ಯುಲೇಷ್ಯಗಳ 188ನೇ ಆರ್ಟಿಕಲ್ ಅನುಸರಿಸಿ ಕಡೂರು ಡಿಸ್ಟ್ರಿಕ್ಟು ಯಕ್ಟ್ಯಾ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಸರ್ ಬಿ. ರಾಮಸ್ವಾಮಿ ಅಯ್ಯಂಗಾರ್ರಿಗೆ, 1896ನೇ ಏಪ್ರೆಲ್ 26ನೇ ಮಕ್ತುಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಪ್ರೊಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಮೊಕ್ಕಾಂ ಮೈಸೂರ್, ತಾರೀಖು 27ನೇ ಏಪ್ರೆಲ್ 1896.

ಸಿ. ನಂ. 217, ಮೈಸೂರ್ ಸರ್ವಿಸ್ ರೆಗ್ಯುಲೇಷ್ಯಗಳ 188ನೇ ಆರ್ಟಿಕಲ್ ಅನುಸರಿಸಿ, ಮೈಸೂರು ಡಿಸ್ಟ್ರಿಕ್ಟು ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಸರ್ ಎಂ. ಚಂಗಯ್ಯಚಟ್ಟಿ, ಬಿ. ಏ, ಯವರಿಗೆ ಮೂಹೆ ಮಜಕೂರ್ 28ನೇ ಮಕ್ತುಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಹದಿಮೂರು ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 12104.—ಜು. 1367. ಚಿತ್ರದುರ್ಗದ ಮ್ಯುನಿಸಿಪ್ ಮೆಸ್ಸರ್ ಏ. ಆನಂದರಾಯರವರು, ಅವರಿಗೆ 1896ನೇ ಫಿಬ್ರವರಿ 14ನೇ ಮಕ್ತುಂ 9448.—ಜು. 1025ನೇ ನಂಬರ್ ಗವರ್ನಮೆಂಟ್ ಇಸ್ತಿಹಾರ್‌ನಾಮೆಯಲ್ಲಿ ಕೊಡಲ್ಪಟ್ಟಿದ್ದ ಪ್ರೊಂದು ತಿಂಗಳ ಪ್ರಿವಿಲೀಜ್ ರಜಾ ಪೈಕೀ 28 ದಿನಗಳು ಮಾತ್ರ ಉಪಯೋಗಿಸಿಕೊಂಡ ಸಬಬ್ ಉಳಿದ ಭಾಗದ ರಜಾ (ಎರಡು ದಿನಗಳು) ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ನಂ. 12100.—ಜು. 1363, ಸ್ 1877ನೇ ಇಸವಿಯ ರಿಜಿಸ್ಟ್ರೇಷ್ ಆಕ್ಟು 6ನೇ ಸೆಕ್ಷನಿನ ನಿಯಮಗಳನುಸರಿಸಿ, ಸೊರಬ ತಾಲ್ಲೂಕು ಅಮಲ್‌ದಾರ್ರು ಆ ತಾಲ್ಲೂಕಿನ ಯಕ್ಸ್ ಅಫಿಷಿಯೋ ಸಬ್ ರಿಜಿಸ್ಟ್ರಾರ್ರಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ತಾರೀಖು 11ನೇ ಏಪ್ರೆಲ್ 1896.

ನಂ. 9361.—ರೆ. 3619, ಮೈಸೂರ್ ಸರ್ವಿಸ್ ರೆಗ್ಯುಲೇಷ್ಯಗಳ 171ನೇ ಆರ್ಟಿಕಲ್ ಅನುಸರಿಸಿ ಫೈಂಬರ್ಚಾಕ್ಸ್ ಸಬ್ ಡಿವಿಜ್ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಸರ್ ಕೆ. ಆರ್. ತ್ರಿನಿವಾಸಯ್ಯಂಗಾರ್ರಿಗೆ 1896ನೇ ಮಾರ್ಚಿ 30 ವ 31ನೇ ಮಕ್ತುಂಗಳಲ್ಲಿ ಎರಡು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ಮೈಸೂರ್ ಕ್ಯಾಂಪ್ ನಂ. 97, ತಾರೀಖು 13ನೇ ಏಪ್ರೆಲ್ 1896.

1896ನೇ ಇಸವಿ ಮಾರ್ಚಿ 6ನೇ ಮತ್ತು 8032—ಎಕ್ಸ್. 245ನೇ ನಂಬರು ಮತ್ತು ಅದೇ ಮಾಸ 5ನೇ ಮತ್ತು 8030—ಎಕ್ಸ್. 243ನೇ ನಂಬರು ಇಸ್ತಿಹಾರುಗಳಲ್ಲಿ ಮೈಸೂರು ಡಿಸ್ಟ್ರಿಕ್ಟಿಗೆ ಕೇರಿದ ಯಡತೊರೆ, ಹುಣಸೂರು, ಹೆಗ್ಗಡದೇವನ ಕೋಟೆ, ಗುಂಡ್ಲುಪೇಟೆ, ಚಾಮರಾಜನಗರ, ಯಳಂದೂರು ಮತ್ತು ತಿರುಮಕೂಡ್ಲು ನರಸೀಪುರ ಈ ತಾಲ್ಲೂಕುಗಳ ಜಾಬತ್ತು 1896-97ನೇ ಸಾಲಿನ ಸಾರಾಯಿ ಬಿಕರಿ ಗುತ್ತಿಗೆ ಫಿರಬಾಗಿಗಳ ಮತ್ತು ಕೇಂದಿ ಫಿರಬಾಗಿಗಳ ಹರಾಜು ಬಗ್ಗೆ ಮೊಕರೆರವು ಮಾಡಲ್ಪಟ್ಟಿರುವ ತಾರೀಖುಗಳಿಗೆ ಬದಲಾಗಿ ಇದರಡಿ ನಮೂದಿಸೋಣಾದ ತಾರೀಖುಗಳಲ್ಲಿ ಹರಾಜು ಕ್ರಮ ನಡಿಸಲ್ಪಡುವದು:—

ತಾಲ್ಲೂಕು.	ಹರಾಜು.	ಕೇಂದಿ.
ಯಡತೊರೆ ..	1896ನೇ ಮೇ ತಾ॥ 23	1896ನೇ ಮೇ ತಾ॥ 23
ಹುಣಸೂರು ..	ಡಿಟೋ 25	ಡಿಟೋ 25 ಮತ್ತು 26
ಹೆಗ್ಗಡದೇವನಕೋಟೆ ..	ಡಿಟೋ 27	ಡಿಟೋ 27
ಗುಂಡ್ಲುಪೇಟೆ ..	ಡಿಟೋ 29	ಡಿಟೋ 29 ಮತ್ತು 30
ಚಾಮರಾಜನಗರ ..	ಡಿಟೋ 31	ಡಿಟೋ 31 ಮತ್ತು ಜೂ 1
ಯಳಂದೂರು ..	1896ನೇ ಜೂ ತಾ॥ 2	ಡಿಟೋ ಡಿಟೋ
ತಿರುಮಕೂಡ್ಲು ನರಸೀಪುರ ..	ಡಿಟೋ 3	1896ನೇ ಜೂ ತಾ॥ 3 ಮತ್ತು 4

ಮೈಸೂರು ತಾರೀಖು 14ನೇ ಏಪ್ರೆಲ್ 1896.

ನಂ. 9384.—ಫಾ. ಸೈ. 119—95, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 188ನೇ ಆರ್ಟಿಕಲ್ ಅನುಸರಿಸಿ ಫಾರೆಸ್ಟ್‌ಗಳ ಅಸಿಸ್ಟೆಂಟ್ ಕರ್ಸರ್‌ವೇಟರ್ ಮೆಸ್ಸರ್ ಯಜ್. ಮುತ್ತಪ್ಪನವರಿಗೆ 1896ನೇ ಏಪ್ರೆಲ್ 15ನೇ ಮತ್ತು ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಬಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಮೊಕ್ಕಾಂ ಮೈಸೂರು ತಾರೀಖು 15ನೇ ಏಪ್ರೆಲ್ 1896.

ನಂ. 278.—ಡಿ. ಸಿ. ಇದರಡಿ ಕಂಡ ಫಾರೆಸ್ಟ್ ಆಫಿಸರುಗಳ ವರ್ಗಾವರ್ಗಿಗಳು ಹುಕುಂ ಮಾಡಲ್ಪಟ್ಟಿರುತವೆ:—

ನಂಬರ್.	ಆಫಿಸರರ ಹೆಸರು ಮತ್ತು ಹುದ್ದೆ.	ಇಂದ.	ಗೆ.	ಯಾವಾಗ ಕೇರತಕ್ಕದ್ದು.
1	ಮೆಸ್ಸರ್ ಯಜ್. ಮುತ್ತಪ್ಪ, ಅಸಿಸ್ಟೆಂಟ್ ಕರ್ಸರ್ವೇಟರ್.	ಸ್ಪೆಷಲ್ ಡ್ಯೂಟಿ	ಬೆಂಗಳೂರು ಡಿಸ್ಟ್ರಿಕ್ಟು	ರಜಾ ಪೂರೈಸಿದ ತರುವಾಯ
2	ಮೆಸ್ಸರ್ ವೈ. ಸೀತಾರಾಮಯ್ಯ ಅಸಿಸ್ಟೆಂಟ್ ಕರ್ಸರ್ವೇಟರ್	ಬೆಂಗಳೂರು ಡಿಸ್ಟ್ರಿಕ್ಟು	ಕೋಲಾರ ಡಿಸ್ಟ್ರಿಕ್ಟು	ಮೆ॥ ಮುತ್ತಪ್ಪನವರಿಗೆ ಚಾರ್ಜು ಪ್ಪೊಪ್ಪಿಸಿದ ತರುವಾಯ
3	ಮೆಸ್ಸರ್ ರಾಮಸ್ವಾಮಿ ಅಯ್ಯರ್	ಕೋಲಾರ ಡಿಸ್ಟ್ರಿಕ್ಟು	ಚಿತ್ರದುರ್ಗ ಡಿಸ್ಟ್ರಿಕ್ಟು	ಮೆ॥ ಸೀತಾರಾಮಯ್ಯನವರಿಗೆ ಚಾರ್ಜು ಪ್ಪೊಪ್ಪಿಸಿದ ತರುವಾಯ
4	ಮೆಸ್ಸರ್ ಕೆ. ಶಾಮಯ್ಯಂಗಾರ್	ಚಿತ್ರದುರ್ಗ ಡಿಸ್ಟ್ರಿಕ್ಟು	ಪಿಕಾರಿಪುರ ಸಬ್ ಡಿವಿಜ್	ಮೆ॥ ರಾಮಸ್ವಾಮಿ ಅಯ್ಯರವರಿಗೆ ಚಾರ್ಜು ಪ್ಪೊಪ್ಪಿಸಿದ ತರುವಾಯ

ನಂ. 9413.—ರೆ. 3647, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 188ನೇ ಆರ್ಟಿಕಲ ಅನುಸರಿಸಿ ಹಾಸನ ಡಿಸ್ಟ್ರಿಕ್ಟು ಪ್ರೋಬೆಷನರಿ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಸರ್ ಕೆ. ಚಂಡಿ, ಬಿ. ಏ. ಯವರಿಗೆ 1896ನೇ ಏಪ್ರೆಲ್ 25ನೇ ಮತ್ತು ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಒಂದು ತಿಂಗಳೂ ಯಿಪ್ಪತ್ತಮೂರು ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಮೊಕ್ಕಾಂ ಮೈಸೂರು, ತಾರೀಖು 16ನೇ ಏಪ್ರೆಲ್ 1896.

ನಂ. 9441.—ರೆ. ಫೈ. 96—95, ಸಿಡ್ಲಗಟ್ಟದ ತಾಲ್ಲೂಕು ಅಮಲ್ದಾರ್ ಸಿರಾ ಶ್ರೀನಿವಾಸರಾಯರಿಗೆ 1896ನೇ ಮಾರ್ಚಿ 27ನೇ ಮತ್ತು 8924—ರೆ. ಫೈ. 96—95ನೇ ನಂಬರ್ ಗವರ್ನಮೆಂಟ್ ಇಸ್ತಿಹಾರ್‌ನಾಮೆಯಲ್ಲಿ ಕೊಡಲ್ಪಟ್ಟಿದ್ದ ಹನ್ನೆರಡು ದಿನಗಳ ಕ್ಯಾಜುಯಲ್ ರಜಾವನ್ನು ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 219ನೇ ಸೆಕ್ಷನ್ ಅನುಸರಿಸಿ ಸ್ವಂತ ಕೆಲಸಗಳ ಮೇಲೆ ರಜಾಕ್ಕೆ ಬದಲಾಯಿಸಲ್ಪಟ್ಟು ಹದಿನೈದು ದಿನಗಳು ಜಾಸ್ತಿಮಾಡಲ್ಪಟ್ಟಿರುತ್ತೆ.

ನಂ. 9444.—ರೆ. ಫೈ. 127—95, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 188ನೇ ಆರ್ಟಿಕಲ್ ಪ್ರಕಾರ ಶಿವಮೊಗ್ಗ ಡಿಸ್ಟ್ರಿಕ್ಟು ನಗರ ತಾಲ್ಲೂಕು ಅಮಲ್ದಾರ್ ಕೆ. ಜಿ. ಅನಂತರಾಮಯ್ಯಂಗಾರ್ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಮೂರು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಸಾಗರದ ಸಬ್ ಡಿವಿಜ್ ಆಫಿಸ್ ಸಿರಸ್ತೇದಾರ್‌ರಾದ ಯಸ್. ಶಾಮರಾಯರು ಸದರೀ ಕೆ. ಜಿ. ಅನಂತರಾಮಯ್ಯಂಗಾರ್ರು ರಜಾದ ಮೇಲೆ ಗೈರಹಾಜರಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವವರೆಯುಂತ ನಗರ ತಾಲ್ಲೂಕು ಅಮಲ್ದಾರ್ ಪ ಮೂರನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆ ಟ್ಯಾಂಗ್ ತರೀಕ್ ಮೊಕರರ್ರಾಮಡಲ್ಪಟ್ಟಿರುತ್ತಾರೆ.

ನಂ. 9464.—ರೆ. 3650, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 188ನೇ ಆರ್ಟಿಕಲ್ ಅನುಸರಿಸಿ ಕೃಷ್ಣರಾಜಪೇಟೆ ತಾಲ್ಲೂಕು ಅಮಲ್ದಾರ್‌ರಾದ ವೆಂಕಟರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಯಿಪ್ಪತ್ತೊಂದು ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಶ್ರೀರಂಗಪಟ್ಟಣದ ತಾಲ್ಲೂಕು ಆಫ್ಟಿಂಗ್ ಡೆಪ್ಯುಟಿ ಅಮಲ್ದಾರ್ ಡಿ. ಸುಬ್ಬರಾಯರು ಸದರೀ ವೆಂಕಟರಾಯರು ರಜಾದ ಮೇಲೆ ಗೈರ್ ಹಾಜರಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಕೃಷ್ಣರಾಜಪೇಟೆ ತಾಲ್ಲೂಕು ಅಮಲ್ದಾರ್ ವ ಮೂರನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ ಮೊಕರರ್ರಾಡಲ್ಪಟ್ಟಿರುತ್ತಾರೆ.

ಮೈಸೂರ್, ತಾರೀಖು 18ನೇ ಏಪ್ರೆಲ್ 1896.

ನಂ. 9474.—ಫಾ. ಫ್ಯೆ. 91—95, ಷಿಕಾರಿಪುರದ ಫಾರಸ್ಟ್ ಸಬ್ ಡಿವಿಜ್ ಫಾರಸ್ಟ್‌ಗಳ ಅಸಿಸ್ಟೆಂಟ್ ಕಂಸರ್‌ವೇಟರ್ ಮೈಸೂರ್ ಬಿ. ಶ್ರೀನಿವಾಸರಾಯರಿಗೆ 1896ನೇ ಏಪ್ರೆಲ್ 10ನೇ ವರ್ತಂ 9316.—ಫಾ. ಫ್ಯೆ. 91—95ನೇ ನಂಬರ್ ಇನ್ಸ್ತಿ ಹಾರ್ನಾಮೆ ಯಲ್ಲಿ ವಿಡಿಕಲ್ ಸರ್ಟಿಫಿಕೇಟಿನ ಮೇಲೆ ಕೊಡಲ್ಪಟ್ಟಿದ್ದ ಪ್ರೊಂಮ್ಮ ತಿಂಗಳ ರಜಾವನ್ನ ಎಡು ತಿಂಗಳ ವರಿಯಂತ ಜಾಸ್ತೀ ಮಾಡಲ್ಪಟ್ಟಿರುತ್ತೆ.

ಫಾರಸ್ಟ್‌ಗಳ ಯಕ್ಟಿಂಗ್ ಅಸಿಸ್ಟೆಂಟ್ ಕಂಸರ್‌ವೇಟರ್ ಮೈಸೂರ್ ಮಾಂಟೇರೊ ಯವರು ಸದರೀ ಮೈಸೂರ್ ಬಿ. ಶ್ರೀನಿವಾಸರಾಯರು ರಜಾದಮೇಲೆ ಗೈರ್ ಹಾಜರಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಷಿಕಾರಿಪುರದ ಫಾರಸ್ಟ್ ಸಬ್ ಡಿವಿಜ್ ಚಾರ್ಜಿನಲ್ಲಿ ಯಿರತಕ್ಕದ್ದು.

ಮೊಕ್ಕಾಂ ಮೈಸೂರ್, ತಾರೀಖು 25ನೇ ಏಪ್ರೆಲ್ 1896.

ನಂ. 9575.—ರೆ. 3696, ಮೈಸೂರ್ ಸರ್ವಿಸ್ ರೆಗ್ಯುಲೇಷ್ಯನ್‌ಗಳ 172ನೇ ಆರ್ಟಿಕಲ್ ಅನುಸರಿಸಿ, ತಿರುಮಕೂಡು ನರಸೀಪುರದ ತಾಲ್ಲೂಕು ಅಮಲ್ದಾರಾಯರಿಗೆ ಜೆ. ಹನುಮಂತರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಹದಿನೈದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ತಾಲ್ಲೂಕು ಪರಸ್ತೇದಾರು, ಸದರೀ ಜೆ. ಹನುಮಂತರಾಯರು ರಜಾದಮೇಲೆ ಗೈರ್ ಹಾಜರಾಗಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಸದರೀ ತಾಲ್ಲೂಕಿನ ಚಾರ್ಜಿನಲ್ಲಿರತಕ್ಕದ್ದು.

ಹುಕುಂ ಬಮೋಜಿಬ್,
ಸಿ. ಶ್ರೀನಿವಾಸಯ್ಯಂಗಾರ್ ಜನರಲ್ ವ ರವಿನ್ಯೂ,
ಇಲಾಖೆಗಳ ಗವರ್ನಮೆಂಟ್ ಸೆಕ್ರೆಟರಿ.

ಮಿಲಿಟರಿ:

ಇನ್ಸ್ತಿ ಹಾರ್ನಾಮಾ.

ತಾರೀಖು 21ನೇ ಏಪ್ರೆಲ್ 1896.

ಕೆರ್ಷ್ ಮೇಲೆ ನಿವೃತ್ತರಾದ ಕಮಾಂಡೆಂಟ್ ರಾಮರಾವ್ ರಣಧೀರ್, ಆರ್. ಬಿ. ಯವರಿಗೆ ಬದಲಾಗಿ ರಿಸಾಲ್ದಾರ್ ಕೃಷ್ಣರಾಯರನ್ನು 1896ನೇ ಏಪ್ರೆಲ್ 11ನೇ ವರ್ತಂ ಲಾಗಾಯತು ಮೈಸೂರ್ ಸವಾರ್ ಲೋಕಲ್ ಸರ್ವಿಸ್ 1ನೇ ರೆಜಿಮೆಂಟ್ ಕಮಾಂಡೆಂಟರಾಗಿ ಫೀನವನ್ನು ಹೊಂದಿದ ಶ್ರೀಮತ್ ಮಹಾರಾಜ್ಞೀ ರೀಜಂಟ್, ಸಿ. ಐ., ಯವರು ಮೊಕರರ್ ಮಾಡಿರುತ್ತಾರೆ.

ಮೈಸೂರ್ ಸವಾರ್ ಲೋಕಲ್ ಸರ್ವಿಸ್ 1ನೇ ರೆಜಿಮೆಂಟಿನಲ್ಲಿ ಇದರಡಿ ಕಂಡ ಬಡ್ತಿಗಳು 1896ನೇ ಏಪ್ರೆಲ್ 16ನೇ ವರ್ತಂ ಲಾಗಾಯತು ಮಾಡಲ್ಪಟ್ಟಿರುತಕ್ಕೆ:—

ಹೆಸರು.	ಹುದ್ದೆಯಿಂದ.	ಹುದ್ದೆಗೆ.	ಷರಾ.
ಮಹಮ್ಮದ್ ಅಲ್ಲಿ ..	ಜಮಾದಾರ್ ..	ರಿಸಾಲ್ದಾರ್, ನಾಲ್ಕನೇ ಗ್ರೇಡ್	ಕೆರ್ಷ್‌ಮೇಲೆ ನಿವೃತ್ತರಾದ ರಿಸಾಲ್ದಾರ್ ತಿಮ್ಮಾಜಿ ಯಲೆಯವರಿಗೆ ಬದಲಾಗಿ.
ಸಯ್ಯದ್ ಫಕ್ರುದ್ದೀನ್ ..	ದಫಾದಾರ್ ..	ಜಮಾದಾರ್	ಬಡ್ತಿ ಮಾಡಲ್ಪಟ್ಟ ಜಮಾದಾರ್ ಮಹಮ್ಮದ್ ಅಲ್ಲಿಯವರಿಗೆ ಬದಲಾಗಿ.

ಹುಕುಂ ಬಮೋಜೇಬ್,
ಏ. ಯಚ್. ಮೆಕ್ಕಿಂಟೈರ್, ಲೆ. ಕರ್ನಲ್,
ಮಿಲಿಟರಿ ಸೆಕ್ರೆಟರಿ.

ಮುಜರಾಯಿ ಇಲಾಖೆ.

ನೋಟಿಫಿಕೇಷ್ಯನ್.

ನಂ. 1086. ಮೊಕ್ಕಾಂ ಮೈಸೂರ್, ತಾರೀಖು 16ನೇ ಏಪ್ರೆಲ್ 1896.

ಇದರಡಿ ಕಂಡವ್ಯಕ್ತಿಗಳು ದಾವಣಗೆರೆ ತಾಲ್ಲೂಕು ಕಡ್ಲಬಾಳ ಆಂಜನೇಯಸ್ವಾಮಿ ದೇವಸ್ಥಾನದ ಧರ್ಮದರ್ಶಿಗಳಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ:—

1. ವಾ॥ ರಾ॥ ಕಡ್ಲಬಾಳ ಶಾನುಭೋಗರಾದ ನರಸಿಂಗರಾಯರು.
2. ಡಿಟೋ ಕಡ್ಲಬಾಳದ ಗುರುವಯ್ಯರು.
3. ಡಿಟೋ ಡಿಟೋ ಪಟೇಲ ಚನ್ನಪ್ಪನವರು.

ಹುಕುಂ ಬಮೋಜೇಬ,
ಏ. ಶ್ರೀನಿವಾಸಾಚಾರ್ಲು,
ಮುಜರಾಯಿ ಸೆಕ್ರೆಟರಿ.